THE MYSORE LEGISLATIVE ASSEMBLY.

ELEVENTH DAY.

Sunday, 22nd March 1953.

The House met in the Assembly Hall, Old Public Offices, Bangalore, at Thirty Minutes past Eight of the Clock.

Mr. SPEAKER (Sri H. Siddaiya, B.A., LL.B.) in the Chair.

QUESTIONS AND ANSWERS

Neera from Date trees near Davangere.

Q.—175. **Sri A. MUNIAPPA** (Sidlaghatta–Chikballapur—Scheduled Castes).—

Will the Government be pleased to state :—

(*a*) whether '*Neera*' is being tapped from date trees near Davangere ;

(*b*) if so, the object with which it is done ;

(*c*) whether they have conducted a survey to ascertain the amount of revenue that could be realised if the practice of *Neera* drink is brought into force ?

A.—**Sri H. SIDDAVEERAPPA** (Minister for Home and Industries).—

(*a*) Yes.

(*b*) For the manufacture of Palm Gur.

(*c*) This question does not arise in view of answer to (*b*).

Sri H. SIDDAVEERAPPA (Minister for Home and Industries).—Sir, before further questions are put I beg to be excused for a slight mistake in answer to (b). It is due to typing mistake. The answer must be 'For the manufacture of Palm Gur and also selling *neera*'. I am sorry that that mistake has occurred.

Mr. SPEAKER.—So also the answer to (c) must be corrected.

Sri H. SIDDAVEERAPPA.—Yes.

ಶ್ರೀ ಎ. ಮುನಿಯಪ್ಪ.—ಈ ವ್ಯವಸ್ಥೆ ಎಷ್ಟು ದಿನದಿಂದ ಇದೆ ?

ಶ್ರೀ ಎಚ್. ಸಿದ್ದವೀರಪ್ಪ.—ಈ ವ್ಯವಸ್ಥೆ 1950 ನೆಯ ಇಸವಿ ಡಿಸೆಂಬರ್‌ನಿಂದ ಪ್ರಾರಂಭವಾಗಿದೆ.

ಶ್ರೀ ಎ. ಮುನಿಯಪ್ಪ.—ಈ ಕೆಲಸವನ್ನು ಸರ್ಕಾರದವರೇ ನೇರವಾಗಿ ಮಾಡಿಸುತ್ತಿದ್ದಾರೆಯೇ ಅಥವಾ ಕಂಟ್ರಾಕ್ಟರಿಂದ ಮಾಡಿಸುತ್ತಿದ್ದಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಗೌರ್ನಮೆಂಟ್ ಆಫ್ ಇಂಡಿಯಾ ಮತ್ತು ಈ ಸರ್ಕಾರದವರು ಇಬ್ಬರೂ ಸೇರಿ ಜಾಯಿಂಟ್ ಸ್ಕೀಂ ಮೇಲೆ ಸರ್ಕಾರದ ಪರವಾಗಿ ಮಾಡಿಸುತ್ತಿದ್ದೇವೆ.

ಶ್ರೀ ಎ. ಮುನಿಯಪ್ಪ.—ಇಲ್ಲಿ ಎಷ್ಟು ಜನರು ಕೆಲಸ ಮಾಡುತ್ತಿದ್ದಾರೆ ?

ಶ್ರೀ ಎಚ್. ಸಿದ್ದವೀರಪ್ಪ.—ನಮ್ಮಕ್ಕೆ ಇಷ್ಟೇ ಜನರು ಕೆಲಸಮಾಡುತ್ತಿದ್ದಾರೆಂಬುದನ್ನು ನಿಖರವಾಗಿ ತಿಳಿಸಲು ಅಂಕಿ ಅಂಶಗಳಿಲ್ಲ. ಆದರೆ ನಾನು ಆ ಸೆಂಟರನ್ನು ನೋಡಿರುವುದರಿಂದ ಸುಮಾರು 15 ಜನರು ಕೆಲಸ ಮಾಡುತ್ತಿದ್ದಾರೆಂದು ಹೇಳಬಲ್ಲೆ.

ಶ್ರೀ ಎ. ಮುನಿಯಪ್ಪ.—ಈ ನೀರಾವನ್ನು ಪೂರ್ತಿಯಾಗಿ ಬೆಲ್ಲ ತಯಾರಿಸುವುದಕ್ಕೆ ಉಪಯೋಗಿಸುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—19-4-1951ರಲ್ಲಿ ಈ ಬಗ್ಗೆ ಒಂದು ಆರ್ಡರ್ ಹೊರಡಿಸಿದೆ. ಅಲ್ಲಿ 600 ಮರಗಳಿವೆ. ಅವುಗಳಿಂದ ಬಂದದ್ದರಲ್ಲಿ ಅರ್ಧದಷ್ಟು ನೀರಾಕ್ಕೂ ಉಳಿದರ್ಧದಷ್ಟು ಬೆಲ್ಲಕ್ಕೂ ಉಪಯೋಗಿಸಬೇಕೆಂದು ಆರ್ಡರ್ ಆಗಿದೆ. ಇದರ ಪ್ರಕಾರ ನಡೆಯುತ್ತಿದೆ.

ಶ್ರೀ ಎ. ಮುನಿಯಪ್ಪ.—ಹೀಗೆ ತಯಾರಾಗುವ ನೀರಾದಲ್ಲಿ ಎಷ್ಟು ಖರ್ಚಾಗುತ್ತಿದೆ ?

ಶ್ರೀ ಎಚ್. ಸಿದ್ದವೀರಪ್ಪ.—ಪೂರ್ತಿಯಾಗಿ ಖರ್ಚಾಗುತ್ತಿದೆ.

ಶ್ರೀ ಎ. ಮುನಿಯಪ್ಪ.—ತಾವು ಈ ಮಾರಾಟದ ವ್ಯವಸ್ಥೆಯನ್ನು ಸರ್ಕಾರದಿಂದ ಮಾಡಿಸುತ್ತಿರೋ ಅಥವಾ ಕಂಟ್ರಾಕ್ಟರ ಮೂಲಕ ಮಾಡಿಸುತ್ತಿರೋ ?

ಶ್ರೀ ಎಚ್. ಸಿದ್ದವೀರಪ್ಪ.—ಒಬ್ಬ ಕಂಟ್ರಾಕ್ಟರಿಗೆ ಪಹಿಸಿದೆ. ಆದರೆ ಈ ಕೆಲಸ ಸರ್ಕಾರದ ನೇತೃತ್ವದಲ್ಲಿ ಫೋಲೀಸ್ ಇಲಾಖೆಯ ತನಿಖೆಗೆ ಒಳಪಟ್ಟು ನಡೆಯುತ್ತಿದೆ.

ಶ್ರೀ ಎ. ಮುನಿಯಪ್ಪ.—ಕಂಟ್ರಾಕ್ಟರಿಂದ ಇದು ದುರುಪಯೋಗವಾಗದಂತೆ ತಕ್ಕ ಬಂದೋಬಸ್ತು ಮಾಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಹೊರಗೆ ಮಾರ ಬಾರದು, ಸ್ಥಳದಲ್ಲಿಯೇ ನೀರಾ ಹೆಂಡವಾಗುವುದರೊಳ ಗಾಗಿ ಮಾರಾಟವಾಗಬೇಕು, ಮಾರಾಟವು ಸರ್ಕಾರದ ತನಿಖೆಗೆ ಒಳಗಾಗಬೇಕು ಎಂದು ಮುಂತಾಗಿ ವ್ಯವಸ್ಥೆ ಮಾಡಿದೆ. ಇದುವರೆಗೂ ಇದು ದುರುಪಯೋಗವಾಗಿದೆ ಯೆಂಬ ಬಗ್ಗೆ ಯಾರಿಂದಲೂ ದೂರು ಬಂದಿಲ್ಲ.

ಶ್ರೀ ಎ. ಮುನಿಯಪ್ಪ.—ಹಾಗಾದರೆ ಮಾರುವುದಕ್ಕೆ ಇಷ್ಟೇ ಹದವಿರಬೇಕೆಂಬ ಬಗ್ಗೆ ವ್ಯವಸ್ಥೆ ಮಾಡಲಾಗಿ ದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—Sample ಆದೊಡ ನೆಯೇ ಮಾರಬೇಕೆಂದಿದೆ.

ಶ್ರೀ ಎ. ಮುನಿಯಪ್ಪ.—ಸರ್ಕಾರದವರು ಉಳಿದಿದ್ದ ರಲ್ಲಿ ಎಷ್ಟು ಬೆಲ್ಲವನ್ನು ತಯಾರುಮಾಡಿಸಿದ್ದಾರೆ ?

ಶ್ರೀ ಎಚ್. ಸಿದ್ದವೀರಪ್ಪ.—1-12-50ರಿಂದ 31-3-51ರವರೆಗೆ 30,150 ಪೌಂಡು, 1-4 51ರಿಂದ 30-4-52ರವರೆಗೆ 4067 ಪೌಂಡು, ಅಲ್ಲಂದೀಚೆಗೆ 353 ಪೌಂಡು ಈ ರೀತಿ ತಯಾರಿಸಿದೆ.

ಶ್ರೀ ಎ. ಮುನಿಯಪ್ಪ.—ಇದಕ್ಕಾಗಿ ತಗಲಿದ ವೆಚ್ಚ ಮತ್ತು ಇದರಿಂದ ಬಂದ ಉತ್ಪತ್ತಿ ಎಷ್ಟು ?

ಶ್ರೀ ಎಚ್. ಸಿದ್ದವೀರಪ್ಪ.—ವೆಚ್ಚವೇನೋ ಆಗಿದೆ ; ಉತ್ಪತ್ತಿ ಎಷ್ಟೆಂಬುದನ್ನು ಖಚಿತವಾಗಿ ಈಗ ತಿಳಿಸಲು ಸಾಧ್ಯವಿಲ್ಲ. ಬೇಕಾದರೆ ಅಂಕ ಅಂಶಗಳನ್ನು ತರಿಸಿ ಕೊಡುತ್ತೇನೆ.

ಶ್ರೀ ಎ. ಮುನಿಯಪ್ಪ —ಯಾವಾಗ ತರಿಸಿಕೊಡು ತ್ತೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ಸದಸ್ಯರಿಗೆ ಇನ್ನೆರಡು ದಿನಗಳಲ್ಲಿ ಒದಗಿಸುತ್ತೇನೆ.

ಶ್ರೀ ಎ ಮುನಿಯಪ್ಪ.—ಇತರ ಈಚಲು ವನಗಳ ಪ್ರದೇಶಗಳಲ್ಲಿ ಈ ರೀತಿ ವ್ಯವಸ್ಥೆಮಾಡುವ ವಿಚಾರದಲ್ಲಿ ಸರ್ಕಾರದ ಅಭಿಪ್ರಾಯವೇನು ?

ಶ್ರೀ ಎಚ್. ಸಿದ್ದವೀರಪ್ಪ.—ಈಗ ನಡೆಯುತ್ತಿರು ವುದು ಪ್ರಾಯೋಗಿಕವಾಗಿ, ಇದರ ಫಲತಾಂಶ ನೋಡಿ ಕೊಂಡು ಬಾಕಿ ಕಡೆ ಏರ್ಪಡಿಸುವ ವಿಚಾರ ಮುಂದೆ ಆಲೋಚಿಸತಕ್ಕದ್ದು.

ಶ್ರೀ ಎ. ಮುನಿಯಪ್ಪ.—ಇಷ್ಟು ದಿನವಾದರೂ ಇದರ ಫಲತಾಂಶ ಯಾವ ರೀತಿ ಇದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಸರ್ಕಾರದವರು ಈ ವಿಚಾರದಲ್ಲಿ ಒಂದು ಅಭಿಪ್ರಾಯಕ್ಕೆ ಬರುವುದಕ್ಕೆ ಅವಕಾಶವಾಗಿಲ್ಲ.

ಶ್ರೀ ಎ. ಮುನಿಯಪ್ಪ.—ಇದು ಸರ್ಕಾರಕ್ಕೆ ಒಪ್ಪಿಗೆ ಯಾದರೆ ಬೇರೆ ಕಡೆಗಳಲ್ಲಿಯೂ ಸಹ ಆ ವ್ಯವಸ್ಥೆ ಮಾಡ ಲಾಗುವುದೇ ?

ಶ್ರೀ ಎಚ್. ಸಿದ್ದವೀರಪ್ಪ.—ಆ ಬಗ್ಗೆ ಯೋಚನೆ ಮಾಡಿ ಕಾರ್ಯಕ್ರಮ ಕೈಗೊಳ್ಳಬೇಕಾಗುತ್ತದೆ.

A Regulated Harket for Cardamom in Manjarabad and Mudigere Taluks.

Q.—250. **Sri G. A. THIMMAPPA GOWDA** (Arkalgud).—

Will the Government be pleased to state :—

(*a*) whether the cardamom growers in Manjarabad and Mudigere Taluks have requested for a Regulated Market for cardamom ;

(*b*) what steps have been taken to implement the above demand of the cardamom growers ?

A.—**Sri H. SIDDAVEERAPPA** (Minister for Home and Industries).—

(*a*) Yes.

(*b*) The matter is under consideration of Government.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಸಕಲೇಶಪುರ ಮತ್ತು ಮೂಡಿಗೆರೆ ವರ್ತಕರಿಂದ ಯಾಲಕ್ಕಿ ಬಗ್ಗೆ ರೆಗ್ಯುಲೇಟೆಡ್ ಮಾರ್ಕೆಟ್ ಏರ್ಪಡಿಸಿಕೊಡುವ ಬಗ್ಗೆ ಏನಾ ದರೂ ವಿರೋಧಾಭಿಪ್ರಾಯ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಈ ಬಗ್ಗೆ ಇದುವ ರೆಗೂ ಆ ವ್ಯಾಪಾರಸ್ಥರು ಯಾವ ಅಭಿಪ್ರಾಯವನ್ನೂ ವ್ಯಕ್ತಪಡಿಸಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಆರಸೀಕೆರೆ ಮತ್ತು ತಿಪಟೂರುಗಳಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ವ್ಯವಸ್ಥೆ ರೈತರಿಗೆ ಉಪಯೋಗವಾಗಿದೆಯೆಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಬಂದಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹಾಗಾದರೆ ಮೂಡಿ ಗೆರೆ ಮತ್ತು ಸಕಲೇಶಪುರದಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಪ್ರಾರಂಭಿಸುವುದಕ್ಕೆ ವ್ಯವಸ್ಥೆಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಸೆಕ್ಷನ್ ನಾಲ್ಕರ ಪ್ರಕಾರ ಈ ಬಗ್ಗೆ ಟೌನ್ ಮುನಿಸಿಪಲ್ ಕೌನ್ಸಿಲ್ಲನವರ ಮತ್ತು ಡಿಸ್ಟ್ರಿಕ್ಟ್ ಬೋರ್ಡಿನವರ ಅಭಿಪ್ರಾಯ ಕೇಳಬೇಕು. ಹೀಗೆ ಕೇಳಿದಾಗ ಡಿಸ್ಟ್ರಿಕ್ಟ್ ಬೋರ್ಡಿನವರು ಆಗ ಬಹುದೆಂದೂ ಟೌನ್ ಮುನಿಸಿಪಲ್ ಕೌನ್ಸಿಲ್ಲನವರು ಆಗ ಕೂಡದೆಂದೂ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಆದರೆ ಸರ್ಕಾರಕ್ಕೇನು ಇದರ ಅವಶ್ಯಕತೆ ಕಂಡು ಬಂದಿದೆಯೋ ಆ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುವ ವಿಚಾರವನ್ನು ಆಲೋಚಿಸುತ್ತೇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಟೌನ್ ಮುನಿಸಿ ಪಲ್ ಕೌನ್ಸಿಲ್‌ನಲ್ಲಿ ಹೆಚ್ಚು ಕಾರ್ಡಮಂ ಮರ್ಚೆಂಟ್ಸ್‌ರೇ ಇದ್ದಾರೆ ಎಂಬುದು ಸರ್ಕಾರದವರ ಗಮನದಲ್ಲಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಅದಕ್ಕೇ ಸರ್ಕಾರ ದವರು ಅದನ್ನು ಯೋಚನೆಮಾಡಿ ಒಂದು ಮಾರ್ಕೆಟ್ ಏರ್ಪಾಡು ಮಾಡಬೇಕೆಂದು ಇದ್ದೇವೆ.

ಶ್ರೀ ಡಿ. ಎಂ. ಗೋವಿಂದರಾಜು.—ರೆಗ್ಯುಲೇಟೆಡ್ ಮಾರ್ಕೆಟ್ಟು ಬೇರೆ ಕಡೆಗೂ ಬೇಕೆಂದು ಸರ್ಕಾರದವರಿಗೆ ಮನವಿ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು, ಮಾನ್ಯ ಸದಸ್ಯ ರಿಂದಲೂ ಮನವಿ ಬಂದಿದೆ.

ಶ್ರೀ ಡಿ. ಎಂ. ಗೋವಿಂದರಾಜು.—ಅದರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ಆಲೋಚನೆ ಮಾಡಿದ್ದೇವೆ.

ಶ್ರೀ ಡಿ. ಎಂ. ಗೋವಿಂದರಾಜು.—ಹೆಚ್ಚಿನ ಖರ್ಚು ಆಗುವ ಪ್ರಮೇಯ ಇದೆಯೇ ?

Sri H. SIDDAVEERAPPA.—I do not think that these things will come within the purview of this question.